(*c*) the reasons for this inordinate delay and when the amount will be paid ?

Sri H. M. CHANNABASAPPA (Minister for Pnblic Works and Electricity).—

(*a*) The reasons for non-payment of compensation are due to change in Government due to States Re-Organisation and frequent changes in the Divisions and cancellation of preliminary notification for land acquisition by Government, being time barred.

(*b*) The road was constructed about 18 years ago. The reasons for non-payment of compensation is detailed in reply to clause (a) above.

(*c*) The reasons for delay in payment is detailed in reply to clause (a) above.. Compensation will be paid after fresh land acquisition proceedings are finalised.

CALLING ATTENTION TO MATTERS OF URGENT PUBLIC IMPORTANCE

re: Attack on people of Puttur by R.S.S. workers.

Smt. ADDY SALDANHA (Mangalore-).— I call the attention of the Chief Minister to the attack on the people of Puttur (South Kanara) by R.S.S. workers.

Sri H. M. CHANNABASAPPA (Minister for Public Works and Electricity).— Sir, on behalf of Chief Minister I state as follows:

One Shri Premachandra Naik was alleged to have been stabbed to death at Puttur in South Kanara District by some persons at about 18–30 hours on 12th March 1973. On hearing this news, large crowds of people gathered at the Police Station and urged for immediate arrest of the accused person. It is reported that some of the R.S.S. Volunteers and B. J. S. workers were trying to search the passing vehicles and suspected houses for the accused. The police warned them not to take law into their own hands, but to give information, if any, to the police for apprehending the wrongdoers. The Deputy Commissioner and the

Superintendent of Police also assured them that the police would investigate the case speedily and in an impartial manner and bring the offenders to book.

On 13-3-1973, at about 14.30 hours, when food was being carried to the police station for the police officials, the crowd snatched and threw it away. At about this time, the President, D.C.C. (R) came to Puttur in his car along with two others to pay homage to the deceased. When his car was passing in front of the Police Station, the crowd pelted stones at the car and also manhandled him. The police rescued him immediately and also resorted to a mild lathi charge to disperse the unruly crowd. A case under sections 143, 148, 341, 323 and 427 IPC r/w 149 IPC has been registered in this connection and the same is pending trial.

The funeral procession passed off peacefully and the cremation was over by 19.00 hours. The crowd which returned from the cremation ground again gathered at the Police Station and started shouting slogans. As the Deputy Commissioner and Seperintendent of Police were trying to pacify the mob, a section of the mob resorted to hurling stones and soda water bottles at the Police Station. As the situation was likely to go out of control, a mild lathi charge was made and the crowd dispersed. A case has been registered for rioting in front of the Police Station and the same is under investigation.

Prohibitory orders Under section 144 Cr. P. C. were promulgated by the Taluk Magistrate in the Town for a period of five days upto 17-3-1973.

Five persons who sustained injuries due to lathi charge were treated as out-patients in the hospital. Two Sub-Inspectors and eight Police Constables also sustained minor injuries due to pelting of stones and soda water bottles. The Police have taken adequate precautionary measures to maintain law and order. There have been no cases of attack on innocent people and minority community. The situation is peaceful.

2-00 P. M.

Smt. WINNIFRED F. FERNANDES.— May I know the names of the accused in this case who have been charge-sheeted ?

Sri H. M. CHANNABASAPPA.— While a number of cases have been filed I cannot straightaway give the names of those people.

Smt. ADDY SALDANHA.— I thank the Government for having taken prompt action. I request the Government to take precautionery measures to prevent such incidents.

Sri H. M. CHANNABASAPPA.— The Government is alive to the facts and it will take all precautionery measures to prevent any untoward happenings.

MATTER UNDER RULE 312:

re : Strike of the House Surgeons in the State.

†ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).— ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೌಸ ಸರ್ಜನಗಳು ಮುಷ್ಕರ ಹೂಡಿದ್ದಾರೆ. ಅವರು ವಿದ್ಯಾವಂತರಾಗಿ ರೋಗಿಗಳನ್ನು ಆಸ್ಪತ್ರೆಯ ಒಳಗಡೆ ಬಿಡದೆ ವೈದ್ಯರನ್ನೂ ಒಳಗಡೆ ಬಿಡದೆ ರೋಗಿಗಳಿಗೆ ಬಹಳ ತೊಂದರೆಯಾಗಿದೆ. ನಿನ್ನೆ ದಿವಸ ಮಾನ್ಯ ಮಂತ್ರಿಗಳು ಬಹಳ ಕಳಕಳಿಯಿಂದ ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರ ಹೇಳಿಕೆಗೆ ಬೆಲೆ ಇಲ್ಲದ ರೀತಿಯಲ್ಲಿ ವರ್ತಿಸಿ, ಅವರ ಹೇಳಿಕೆಯನ್ನು ಶಾಂತರೀತಿಯಿಂದ ಪರಿಶೀಲನೆ ಮಾಡಿ ತಿಳಿದುಕೊಳ್ಳದೆ ಈ ರೀತಿ ರೋಗಿಗಳಿಗೆ ಆಸ್ಪತ್ರೆ ಒಳಗಡೆ ಹೋಗುವುದಕ್ಕೆ ತೊಂದರೆ ಕೊಡುತ್ತಿದ್ದಾರೆ. ನಾನು ಇದನ್ನು ಕಣ್ಣಾರೆ ನೋಡಿ ಬಂದಿದ್ದೇನೆ. ಅಲ್ಲಿ ಆಕ್ಸಿಡೆಂಟ ಕೇಸುಗಳನ್ನು ಅಡ್ಮಿಟ ಮಾಡುವುದಕ್ಕೆ ಬಿಟ್ಟಿಲ್ಲ. ರೋಗಿಗಳಿಗೂ ಒಳಗಡೆ ಹೋಗುವುದಕ್ಕೆ ಬಿಟ್ಟಿಲ್ಲ. ಬಹುಶಃ ಈ ಒಂದು ಗೊಂದಲದಲ್ಲಿ ಕೆಲವು ರೋಗಿಗಳು ಸತ್ತು ಹೋಗಿರಬಹುದು. ಇಂಥಾ ಒಂದು ಪರಿಸ್ಥಿತಿಯು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಉಂಟಾಗಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಿಗೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ವಿದ್ಯಾವಂತ ವೈದ್ಯರುಗಳು ಸೌಜನ್ಯ ರೀತಿಯಿಂದ ವರ್ತಿಸಿಲ್ಲ. ಆದ್ದರಿಂದ ಅವರ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎಂಬುದನ್ನು ದಯವಿಟ್ಟು ಹೇಳಬೇಕು.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).— ರೋಗಿಗಳು ಆಸ್ಪತ್ರೆಯ ಒಳಗಡೆ ಹೋಗುವುದಕ್ಕೆ ಬಿಡುವುದಿಲ್ಲ. ಮಾನ್ಯ ಮಂತ್ರಿಗಳು ಅವರ ಬಗ್ಗೆ ಸಹಾನುಭೂತಿಯನ್ನು ತೋರಿಸಿ ಅವರಿಗೆ ಕೆಲಸವನ್ನು ಒದಗಿಸಿಕೊಟ್ಟಿದ್ದಾರೆ. ಹೀಗಿರುವಾಗ ಈ ರೀತಿ ಅವರು ವರ್ತನೆ ಮಾಡುವುದು ಸರಿಯಲ್ಲ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಅವರನ್ನು ವಿದ್ಯಾವಂತರನ್ನಾಗಿ ಮಾಡಿರುವಾಗ, ಅವರು ಜನಗಳಿಗೆ ತೊಂದರೆ

ಕೊಡತಕ್ಕ ಕೆಲಸ ಮಾಡಿರುವುದು ಸರಿಯೇ? ದಯವಿಟ್ಟು ಈ ವಿಷಯದಲ್ಲಿ ಸರಿಯಾದ ರೀತಿಯಲ್ಲಿ ತೀರ್ಮಾನ ಮಾಡಬೇಕಾಗಿದೆ. ಮಾನ್ಯ ಮಂತ್ರಿಗಳು ಅವರ ಯಾವ ಹೆದರಿಕೆಗೂ ಬಗ್ಗಬಾರದು; ಅವರು ಜನಗಳ ಸೇವೆಯನ್ನು ಮರೆತು ಈ ರೀತಿ ರೌಡಿಜಂನಿಂದ ವರ್ತಿಸುವುದು ಸರಿಯಲ್ಲ. ಸೇವಾ ಮನೋಭಾವ ಇರತಕ್ಕವರು ಈ ರೀತಿಯ ಧೋರಣೆಯನ್ನು ತಾಳಿರುವುದು ಸರಿಯಲ್ಲ. ಮುಂದೆ ಸೇವೆ ಮಾಡುವವರು ಪ್ರಾರಂಭದಲ್ಲಿಯೇ ಹೀಗೆ ಮಾಡಿದರೆ ಹೇಗೆ? ಮಾನ್ಯ ಮಂತ್ರಿಗಳು ಯಾರ ಪ್ರಭಾವಕ್ಕೂ ಹೆದರದೆ ಕ್ರಮ ತೆಗೆದುಕೊಂಡು ಜನಗಳ ಹಿತವನ್ನು ಕಾಪಾಡಬೇಕು ಎಂದು ನಾನು ಹೇಳುತ್ತೇನೆ.

†ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು — ಹೌಸ ಸರ್ಜನಗಳು ಎಸೆನ್ಷಿಯಲ್ ಸರ್ವೀಸನವರು. ಆದರೂ ಸಹ ಅವರು ಈ ರೀತಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮತ್ತು ಬೌರಿಂಗ ಆಸ್ಪತ್ರೆಯಲ್ಲಿ ಸ್ಟೈಕ ಮಾಡುತ್ತಾ ಇರುವುದರಿಂದ ಜನಗಳಿಗೆ ತೊಂದರೆಯಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಅವರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎಂಬುದನ್ನು ಈ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಡಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).— ಸ್ವಾಮಿ, ನನ್ನ ಸ್ವಂತ ಅನುಭವವನ್ನು ನಾನು ಹೇಳುತ್ತೇನೆ. ನಮ್ಮ ತಂದೆಯವರಿಗೆ ೮೩ ವರ್ಷ ವಯಸ್ಸಾಗಿದೆ. ಅವರಿಗೆ ಆಪರೇಷನ ಆಗಿದೆ. ಅವರಿಗೆ ಮೂತ್ರ ಹೋಗುವುದಕ್ಕೆ ಟ್ಯೂಬ ಇಟ್ಟಿದ್ದಾರೆ. ಅವರು ಹಳ್ಳಿಯಲ್ಲಿ ಖಾಯಿಲೆ ಇದ್ದರು. ಆದ್ದರಿಂದ ಅವರಿಗೆ ಖಾಯಿಲೆ ತುಂಬಾ ತೀಕ್ಷ್ಣವಾಗಿ ಅವರನ್ನು ಜರೂರಾಗಿ ಬೌರಿಂಗ ಆಸ್ಪತ್ರೆಗೆ ಸೇರಿಸಬೇಕೆಂದು ನಾನು ಅವರನ್ನು ಕರೆದುಕೊಂಡು ಹೋದೆ. ಆದರೆ ಅಲ್ಲಿ ಸ್ಟೈಕ ಮಾಡುತ್ತಿದ್ದ ಹೌಸ ಸರ್ಜನಗಳು ನಮ್ಮ ತಂದೆಯವರನ್ನು ಆಸ್ಪತ್ರೆಯ ಒಳಗಡೆ ಕರೆದುಕೊಂಡು ಹೋಗುವುದಕ್ಕೆ ಬಿಡಲಿಲ್ಲ. ತಮಗೆ ಫೋನ ಮಾಡಿದೆ. ಆದರೆ ತಾವು ಸಿಕ್ಕಲಿಲ್ಲ ಪ್ರಾಣಬಿಡತಕ್ಕ ರೋಗಿಗಳನ್ನು ಆಸ್ಪತ್ರೆಗೆ ಒಳಗಡೆ ಉಪಚಾರಕ್ಕೆ ಕರೆದುಕೊಂಡು ಹೋಗುವುದಕ್ಕೆ ಬಿಡುತ್ತಿಲ್ಲ. ಮತ್ತು ಬೇರೆ ಡಾಕ್ಟರುಗಳನ್ನು ಆಸ್ಪತ್ರೆಯ ಒಳಗಡೆ ಬಿಡುತ್ತಿಲ್ಲ. ಇಂಥಾ ಒಂದು ಪರಿಸ್ಥಿತಿ ದೇಶದಲ್ಲಿ ಇರುವುದರಿಂದ ಶ್ರೀಮಾನ ಮಂಜುನಾಥ ಅವರು ಹೇಳಿದಂಥಾದ್ದನ್ನು ನಾನು ಸಮರ್ಥನೆ ಮಾಡುತ್ತೇನೆ. ಈ ಸಮಸ್ಯೆ ಬೃಹದಾಕಾರವಾಗಿರುವುದರಿಂದ ಇದನ್ನು ಬೆಳೆಯುವುದಕ್ಕೆ ಅವಕಾಶವನ್ನು ಕೊಡದೆ. ಅದಕ್ಕೆ ಸಂಬಂಧಪಟ್ಟ ಮುಖಂಡರನ್ನು ಕರೆಸಿ ಸಮಾಲೋಚನೆ ಮಾಡುವುದಕ್ಕೆ ಏರ್ಪಾಟು ಮಾಡಬೇಕು. ಈ ಸ್ಟೈಕಿಗೆ ವೈದ್ಯರುಗಳ ಬೆಂಬಲ ಇದೆಯೆಂದು ಗೊತ್ತಾಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ತೀಕ್ಷ್ಣವಾಗಿ ಯೋಚನೆ ಮಾಡಿ ವಿಮರ್ಶೆ ಮಾಡಿ ಅದನ್ನು ಇತ್ಯರ್ಥಮಾಡಬೇಕು.

†ಶ್ರೀಎಚ್. ಪುಟ್ಟದಾಸ(ಸಾಕನೂರು).—ನಿನ್ನೆಯ ದಿವಸ ಮಾನ್ಯ ಆರೋಗ್ಯ ಮಂತ್ರಿಗಳು ಹೌಸ ಸರ್ಜನಗಳ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿ ಅವರ ಬೇಡಿಕೆಗಳನ್ನು ಪರಿಶೀಲನೆ ಮಾಡುವ ರೀತಿಯಲ್ಲಿ ಭರವಸೆಯನ್ನು ಕೊಟ್ಟರು. ಆ ಆಧಾರದ ಮೇಲೆ ನಾನು ಮಾನ್ಯ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಅವರ ಮನಸ್ಸು ಯಾವ ರೀತಿ ಇದೆಯೆಂಬುದನ್ನು ಅರ್ಥ ಮಾಡಿಕೊಂಡು ನಿನ್ನೆ ೬ ಗಂಟೆಯಿಂದ ಹಿಡಿದು, ಲಗ್ಗಿ ಗಂಟೆಯವರೆಗೆ ನಾನು ಈ ಹೌಸ ಸರ್ಜನಗಳ ಮುಖಂಡರ ಜೊತೆಯಲ್ಲಿ ಸಮಾಲೋಚನೆ ಮಾಡಿದೆ. ಅವರ ಮಾತುಗಳಿಂದ ನನಗೆ ಗೊತ್ತಾಯಿತು. ಅವರು ಮುಷ್ಕರವನ್ನು ನಿಲ್ಲಿಸುವುದಕ್ಕೆ ಫಲಕಾರಿಯಾದ ಮಾತುಗಳನ್ನು ಆಡಿದರು. ಬೆಳಿಗ್ಗೆ ಸಹ ಹೌಸ ಸರ್ಜನಗಳು ಸರಕಾರದ ಜೊತೆಯಲ್ಲಿ ಸಹಕರಿಸುವ ಇಷ್ಟವನ್ನು ಹೊಂದಿದ್ದರು. ಆದರೆ ಕೆಲವರು ಮಾತ್ರ ಅಡ್ಡಿ ಮಾಡುತ್ತಿದ್ದಾರೆ. ಯಾವ ರೀತಿಯಲ್ಲಿ ಅವರ ಬೇಡಿಕೆಗಳನ್ನು ಪರಿಶೀಲನೆ ಮಾಡುತ್ತಾರೆ ಎನ್ನುವ ಬಗ್ಗೆ ಬೆಳಿಗ್ಗೆ ಮಂತ್ರಿಗಳ ಜೊತೆಯಲ್ಲಿ ಮಾತನಾಡುವಾಗ ಅವರು ಭರವಸೆಯನ್ನು ಕೊಟ್ಟಿದ್ದಾರೆ. ಆದರೂ ಸಹ ನಮ್ಮ ಮಿತ್ರರು ಹೇಳಿದಂತೆ ಆಸ್ಪತ್ರೆಯ ಒಳಗಡೆ ಹೋಗುವುದಕ್ಕೆ ಕಮ್ಯುನಿಕೇಷನಗೋಸ್ಕರ ಡೀನ ಒಬ್ಬರನ್ನು ಮಾತ್ರ ಒಳಗಡೆ ಬಿಟ್ಟರು. ಮಿಕ್ಕ ಯಾವ ಡಾಕ್ಟರುಗಳನ್ನಾಗಲೀ ಸ್ಪೆಷಲಿಸ್ಟಗಳನ್ನಾಗಲೀ ಒಳಗಡೆ ಬಿಡಲಿಲ್ಲ. ಶ್ರೀಮಾನ ಚಿಕ್ಕೇಗೌಡರು ಈ ತಿಂಗಳು ೨೬ನೇ ತಾರೀಖು ವಿದೇಶಕ್ಕೆ ಪ್ರಯಾಣ ಮಾಡುತ್ತಾರೆ. ಅವರು ಆಸ್ಪತ್ರೆಗೆ ಹೋದರೆ ಅವರ ಆಪ್ಸಿಸ್ ಅನ್ನು ಓಪನ ಮಾಡುವುದಕ್ಕೆ ಒಳಗಡೆ ಬಿಡದೆ ಅವರನ್ನು ತಡೆ ಹಿಡಿದಿದ್ದಾರೆ. ಆದ್ದರಿಂದ ಆ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ಅಲ್ಲಿ ವಾತಾವರಣವನ್ನು ತಿಳಿಮಾಡಬೇಕು ಎಂದು ನಾನು ಹೇಳುತ್ತೇನೆ.

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ನಿನ್ನೆ ದಿವಸ ಮಾನ್ಯ ಮಂತ್ರಿಗಳು ಈ ಮುಷ್ಕರದ ಬಗ್ಗೆ ಹೇಳಿದ್ದಾರೆ. ಮತ್ತು ಸಂಬಂಧಪಟ್ಟವರೊಡನೆ ಸಮಾಲೋಚನೆ ಮಾಡೋಣ ಎಂದು ಹೇಳಿದ್ದಾರೆ. ಹೀಗಿರುವಾಗ ಹೌಸ ಸರ್ಜನಗಳು ಈ ಮುಷ್ಕರಕ್ಕೆ ಇಳಿದಿರುವುದು ಸರಿಯಲ್ಲ. ಹೀಗಿರುವಾಗ ರೋಗಿಗಳ ಪರಿಸ್ಥಿತಿ ಏನಾಗಿದೆ ಎಂಬುದು ಗೊತ್ತಾಗುತ್ತದೆ. ರೋಗಿಗಳು ಎಷ್ಟೋ ಜನ ಪರದೇಶಿಗಳು ಇದ್ದಾರೆ. ಈ ಬಗ್ಗೆ ನಾವು ಆತಂಕಪಡಬೇಕಾಗಿದೆ. ಇವೊತ್ತು ಅವರ ಪರಿಸ್ಥಿತಿ ಏನಾಗಿರಬಹುದು ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಅವರ ಬೇಡಿಕೆಯನ್ನು ಪರಿಶೀಲಿಸುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರೂ ಕೂಡ ಅವರು ಅನುಸರಿಸಿದ ನೀತಿಯನ್ನು ನೋಡಿ ಖೇದವನ್ನು ವ್ಯಕ್ತಪಡಿಸಬೇಕಾಗಿದೆ. ಆದ್ದರಿಂದ ಅವರ ಬಗ್ಗೆ ಸರ್ಕಾರದವರು ಬಿಗಿಯಾದ ವರ್ತನೆ ಮಾಡಬೇಕೆಂದು ನಾನು ನಿರೀಕ್ಷೆ ಮಾಡುತ್ತೇನೆ. ಅವರಿಗೆ ಸ್ಟೈಪಂಡ ಕೊಡುವದು ಒಂದು ಕಡ್ಡಾಯವಾದ ರೈಟ್ ಎಂದು ಭಾವನೆ ಮಾಡಿದ ಹಾಗೆ ಕಾಣುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಗಮನಿಸಬೇಕು. ಬೆಂಗಳೂರಿನಲ್ಲಿ ಒಂದು ಕಡೆ ಮಾತ್ರ ಇಂಥಾ ಮುಷ್ಕರಗಳು ನಡೆಯುವು

ದಿಲ್ಲ, ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಇದೆ. ರಾಜ್ಯದ ಎಲ್ಲಾ ಕಡೆಗಳಲ್ಲೂ ಮೆಡಿಕಲ್ ಕಾಲೇಜುಗಳು ಇವೆ, ಎಲ್ಲಾ ಕಡೆಗಳಲ್ಲಿಯೂ ಹೌಸ ಸರ್ಜನಗಳು ಇದ್ದಾರೆ. ಆದ್ದರಿಂದ ಪರಿಸ್ಥಿತಿ ಗಂಭೀರವಾಗುತ್ತದೆ. ಅದನ್ನು ತಡೆಯುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಸುಧಾರಿಸುವುದಕ್ಕೆ ಯಾವ ಕ್ರಮವನ್ನು ಅನುಸರಿಸಿದ್ದೀರಿ ಎನ್ನುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ನಾನು ಮಾನ್ಯ ಮಂತ್ರಿಗಳಿಂದ ಅಪೇಕ್ಷೆ ಮಾಡುತ್ತೇನೆ.

†ಶ್ರೀ ವಿ. ಎನ್. ಪಾಟೀಲ (ಹುಮ್ನಾಬಾದ).— ನಿನ್ನೆ ಈ ವಿಷಯ ಈ ಮನೆಯಲ್ಲಿ ಬಂದಾಗ ಮಾನ್ಯ ಆರೋಗ್ಯ ಸಚಿವರು ಈ ಬಗ್ಗೆ ಕ್ಲಿಯರ ಆಗಿ ಹೇಳಿದ್ದಾರೆ. ಅವರ ಬೇಡಿಕೆಗಳನ್ನು ಪರಿಶೀಲನೆ ಮಾಡುವುದಾಗಿ ಹೇಳಿದ್ದಾರೆ. ಮತ್ತು ಅವರ ಬಗ್ಗೆ ಸಹಾನುಭೂತಿಯನ್ನು ತೋರಿಸಿದ್ದಾರೆ. ಅದರ ಜೊತೆಗೆ ಆ ಕಡೆ ಮತ್ತು ಈ ಕಡೆ ಎಲ್ಲಾ ಸದಸ್ಯರೂ ಕೂಡ ಹೌಸ ಸರ್ಜನ ಬಗ್ಗೆ ಸಹಾನುಭೂತಿಯನ್ನು ತೋರಿಸಿದ್ದಾರೆ. ಆದರೂ ಸಹ ಅವರು ಮಾಡಿದಂತಹ ಅಪ್ರೋಚ್ ಏನಿದೆ ಅದು ಖಂಡನೀಯವಾದುದು. ತಾವು ಇದನ್ನು ಒಂದು ಹ್ಯೂಮನ್ ಅಪ್ರೋಚ್ ಮೇಲೆ ನೋಡಬೇಕು. ಇವತ್ತು ಸರ್ಕಾರೀ ಹಾಸ್ಪಿಟಲುಗಳಿಗೆ ಯಾರು ಬಡ ಜನ ಇದ್ದಾರೆ, ಅವರು ಬರುವುದಲ್ಲದೆ ಶ್ರೀಮಂತ ಜನರು ಬರುತ್ತಾ ಇಲ್ಲ. ಅಲ್ಲಿ ಯಾವ ಒಬ್ಬ ಸ್ಪೆಶ್ಯಲಿಸ್ಟ ಅಥವಾ ಇತರ ಡಾಕ್ಟರ್ಸ ರೋಗಿಗಳನ್ನು ನೋಡುವುದಕ್ಕೆ ಹೋಗುತ್ತಾ ಇಲ್ಲ. ಇದನ್ನು ನಾವು ಖಂಡನೆ ಮಾಡಲೇಬೇಕಾಗಿದೆ. ಆದ್ದರಿಂದ ತಾವು ಇದರ ಬಗ್ಗೆ ಒಂದು ಮಾತು ಕತೆಗೆ ಅವಕಾಶ ಮಾಡಿಕೊಟ್ಟು ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. Deputy Speaker.— As I understand, the Hon. Minister is at it.

Sri V. N. Patil.— Patience of the people is being tried out. Suffering people are there and they should not be made scapegoat between the Government and the Doctors. No relief is forthcoming.

†ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಇದುವರೆಗೂ ಕಳಕಳಿಯಿಂದ ಮಾತನಾಡಿದಂತಹ ಉಭಯ ಪಕ್ಷಗಳ ಸದಸ್ಯರ ಮಾತನ್ನೂ ಕೇಳಿದ್ದೇನೆ. ಈ ದಿವಸ ನಾನು ಬಹಳ ಅನುಕಂಪದಿಂದ ಮಾತನಾಡಬೇಕಾಗಿದೆ. ಈ ಹೌಸ ಸರ್ಜನ್ಸಿಗೆ ಕೌಸ್ ಆಫ್ ಆಕ್ಷನ್ ಏನಾದರೂ ಮಾಡಿ ತೋರಿಸಬೇಕೆಂದಿದ್ದರೆ, ಅದನ್ನು ಸರ್ಕಾರದ ಮೇಲೆ ತೋರಿಸಬೇಕಲ್ಲದೆ ಅಲ್ಲಿರ ತಕ್ಕಂತಹ ರೋಗಿಗಳ ಮೇಲೆ ಅಥವಾ ಅಲ್ಲಿಗೆ ಚಿಕಿತ್ಸೆಗೆ ಬರತಕ್ಕಂತಹ ಜನರ ಮೇಲೆ ಅಲ್ಲ. ನಮ್ಮ ಮೇಲೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದರೆ, ನಾವು ಏನೂ ಹೇಳುತ್ತಾ ಇರಲಿಲ್ಲ. ಅದು ಬಿಟ್ಟು ಆಸ್ಪತ್ರೆ ಬಾಗಿಲಿಗೆ ಬರುವವರಿಗೆ ಫೇರಾವೊ ಮಾಡಿಕೊಂಡು ಆಸ್ಪತ್ರೆ ಒಳಗೆ ಡಾಕ್ಟರುಗಳನ್ನು ಸಹ ಹೋಗದಂತೆ ಮಾಡಿ, ಅವರು ಚಿಕಿತ್ಸೆ

ಮಾಡದಂತೆ ಮಾಡುವುದು ಶೀರಾ ಖಂಡನೀಯವಾದುದು ಮತ್ತು ಅಮಾನುಷ್ಯ ಕೃತ್ಯವೆಂದು ಹೇಳಬೇಕಾಗುತ್ತದೆ. ಈ ರೀತಿಯಲ್ಲಿ ಪರಿಸ್ಥಿತಿಯನ್ನು ತಂದೊಡ್ಡುತ್ತಾರೆಂದು ನಾನು ತಿಳಿದಿರಲಿಲ್ಲ. ನಾನು ನಿನ್ನೆ ಮೊನ್ನೆ ಮಾಡಿದ ಹೇಳಿಕೆಯ ಮೇಲೆ ಇದನ್ನು ಶುಂಬಾ ಸಹಾನುಭೂತಿಯಿಂದ ಯೋಚನೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೆ. ಮಾನ್ಯ ಪುಟ್ಟಣ್ಣದಾಸರು ಸಹ ಅಲ್ಲಿ ಅವರೊಡನೆ ಮಾತನಾಡಿದಾಗ ಅವರು ಮಾತನಾಡಿದ ರೀತಿ ನೀತಿ ಮತ್ತು ಧಾಟಿ—ಇವೆಲ್ಲವನ್ನೂ ನೋಡಿದರೆ, ನನಗನ್ನಿಸುತ್ತದೆ, ಇವರು ಚಿಕ್ಕವಯಸ್ಸಿನವರು, ಹುಡುಗ ಬುದ್ಧಿಯಲ್ಲಿ ಏನೋ ಮಾಡುತ್ತಿದ್ದಾರೆ ಎಂದು. ಆದರೆ ಇವತ್ತು ಬೆಳಿಗ್ಗೆ ಬಾಕಿ ಕಾಲೇಜುಗಳಿಂದ ಸಹ ಬಂದ ವರ್ತಮಾನದ ಪ್ರಕಾರ, ಇವರಿಗೆ ಒಂದು ಆಕ್ಷನ್ ಕಮೀಟಿ ಎಂದು ಇದೆಯಂತೆ. ಆದು ಏನು ತೀರ್ಮಾನ ಮಾಡುತ್ತದೆ. ಅದರ ಪ್ರಕಾರ ಇವರು ನಡೆಯುತ್ತಿದ್ದಾರಂತೆ. ಹಾಗೆ ನಡೆಯುವುದಕ್ಕೆ 'ಇದು ಏನು ಟ್ರೇಡ ಯೂನಿಯನ್' ಅಲ್ಲ. ಇದು ಎಸೆನ್ಷಿಯಲ್ ಸರ್ವಿಸ ಕೆಳಗೆ ಬರುತ್ತದೆಯೇ ಇಲ್ಲವೇ ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಈಗ ಇಷ್ಟೆಲ್ಲಾ ಹೇಳಿದರೂ, ನಾನು ಅವರಿಗೆ ಸಭೆಯ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಅವರು ಅವರ ಮನಸ್ಸಿನ ಬದಲಾವಣೆಯನ್ನು ಮಾಡಿಕೊಳ್ಳಬೇಕು. ಹಾಗೆ ಮಾಡಿಕೊಳ್ಳಲಿಲ್ಲವೆಂದರೆ, ಸರ್ಕಾರ ಆ ಮೇಲೆ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ನಾನು ಆಗಲೇ ನಿರ್ಧಾರ ಮಾಡಿದ್ದೇನೆ. ಆದರಿಂದ ಅವರು ಬಹಳ ತೊಂದರೆಯನ್ನು ಅನುಭವಿಸಬೇಕಾಗಿದೆ; ಸರ್ಕಾರ ಏನೂ ಅನುಭವಿಸಬೇಕಾಗಿಲ್ಲ ಲಾ ಆಂಡ್ ಆರ್ಡರ ಪೋಲಿಸನ್ನು ಯಾವ ರೀತಿ ಡೀಲ ಮಾಡಬೇಕೆಂದು ನಮಗೆ ಗೊತ್ತಿದೆ. ಆದರೆ ನಾವು ಅಷ್ಟು ದೂರ ಹೋಗಿಲ್ಲ. ಆದ್ದರಿಂದ ಇವರಿಗೆ ಏನಾದರೂ ಪರಿಜ್ಞಾನ ಬಂದರೆ ಇದು ಸರಿಹೋಗಬಹುದು. ಈಗಲೂ ಸಹ ನಾನು ಮತ್ತೊಮ್ಮೆ ಈ ಸಭೆಯ ಮುಖಾಂತರ ಕೇಳಿಕೊಳ್ಳುತ್ತೇನೆ. ಅವರು ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇನ್ನೊಂದು ಏನೆಂದರೆ ನಾಳೆಯ ದಿವಸ ನಾವು ಯಾವುದಾದರೂ ಒಂದು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಲು ಸಂದರ್ಭ ಬಂದರೆ ತೆಗೆದುಕೊಳ್ಳಬೇಕಾಗುತ್ತದೆ. ಆಗ ಎರಡೂ ಕಡೆಯ ಸದಸ್ಯರಿಂದಲೂ ನಮಗೆ ಸಹಕಾರ ಮತ್ತು ಸಹಾನುಭೂತಿ ಇದೆಯೆಂದು ನಿರೀಕ್ಷಣೆ ಮಾಡುತ್ತೇನೆ. ಆದಲ್ಲದೆ ಅಲ್ಲಿ ನೂರಕ್ಕೆ ೯೦ ಭಾಗ ಬಡವರಾಗಿರತಕ್ಕಂತಹ ರೋಗಿಗಳ ಬಗ್ಗೆ ಸಹ ಅಪಾರ ಕರುಣೆಯನ್ನು ತೋರಿಸಬೇಕಾಗಿದೆ. ಇವತ್ತಿನವರೆಗೆ ಮಾನ್ಯ ಸದಸ್ಯರು ಹೇಳಿದ ಹಾಗೆ ಎಷ್ಟು ಜನರು ಪ್ರಾಣ ನೀಗಿದ್ದಾರೆಂದು ನಮಗೆ ಗೊತ್ತಿಲ್ಲ. ಉಪವಾಸ ಮಾಡುವುದಾದರೂ ಆತ್ಮಸಾಕ್ಷಿಯಾಗಿ ಮಾಡಬೇಕಲ್ಲದೆ ಈ ರೀತಿ ಮಾಡುವುದು ಶೋಚನೀಯ ಮತ್ತು ಖಂಡನೀಯವಾದುದು. ಆದ್ದರಿಂದ ನಾನು ಸಾರ್ವಜನಿಕರಲ್ಲೂ ಇದರಿಂದಾಗಿ ಆದ ತೊಂದರೆಗೆ ಕ್ಷಮಾಪಣೆಯನ್ನು ಕೇಳುತ್ತೇನೆ. ಇದಕ್ಕೆ ಸರ್ಕಾರ ಕಾರಣವಲ್ಲ ಮತ್ತು ಅಲ್ಲಿರತಕ್ಕಂತಹ ಡಾಕ್ಟರುಗಳು ಸಹ ಕಾರಣರಲ್ಲ; ಕೆಲವು ಹೌಸ ಸರ್ಜನುಗಳ ನಡವಳಿಕೆಯಿಂದ ತೊಂದರೆಯಾಗಿದೆ. ನನಗೆ ಶಾವೆಲ್ಲರೂ ಸಾರ್ವಜನಿಕ ಪ್ರತಿನಿಧಿಗಳಾಗಿ ನಿಮ್ಮ ಅಭಿಪ್ರಾಯವನ್ನು ದೇಳಿದ್ದಕ್ಕೋಸ್ಕರ ನಿಮಗೆ ಚಿರಋಣಿಯಾಗಿದ್ದೇನೆ. ಅದೇ

ರೀತಿ ಪತ್ರಿಕಾಕರ್ತರಲ್ಲೂ ಸಹ ನಾನು ಕೇಳಿಕೊಳ್ಳುವುದೇನೆಂದರೆ, ಇದನ್ನು ಸರಿಯಾದ ದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ ಮತ್ತು ಜನತೆಯ ಅಭಿಪ್ರಾಯದ ದೃಷ್ಟಿಯಿಂದ ಇವರು ಮಾಡಶಕ್ಯದ್ದು ಸರಿಯಲ್ಲ, ಮತ್ತು ಖಂಡನೀಯ ಎಂದು ದೇಶದ ಜನತೆಯ ಮುಂದಿಟ್ಟು, ಇವರು ಹೊಂದಿರಶಕ್ಯಂತಹ ನೀತಿಯ ಬದಲಾವಣೆ ಮಾಡುವುದಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿದ ತಕ್ಷಣ ನಾನು ಯಾವ ರೀತಿಯ ಅಕ್ರಿಮೋನಿಯಿಂದ ಆಗಲಿ, ಅಥವಾ ಯಾವುದೇ ರೀತಿಯ ದ್ವೇಷದಿಂದಾಗಲಿ ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಇದನ್ನು ಅತ್ಯಂತ ಸಹಾನುಭೂತಿಯಿಂದ ಬಿಡಿಸುವುದಕ್ಕೆ ಈಗಲೂ ನಾನು ತಯಾರಾಗಿದ್ದೇನೆ. ನಾಳೆ ಬೆಳಿಗ್ಗೆ ೮ ಗಂಟೆಯವರೆಗೆ ಸಮಯ ಕೊಟ್ಟು, ನಾಳೆಯಿಂದಲೂ ಇದೇ ಕಾರ್ಯಕ್ರಮವನ್ನು ಅವರು ಹಾಕಿಕೊಂಡರೆ ಅವರ ಬಗ್ಗೆ ಯಾವ ರೀತಿ ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಇತ್ಯರ್ಥ ಮಾಡಿದ್ದೇವೆ. ಅದಕ್ಕೆ ಅವಕಾಶ ಕೊಡಕೂಡದೆಂದು ನನ್ನ ಪ್ರಾರ್ಥನೆ.

ಆ ಮೇಲೆ ಮಾನ್ಯ ಪುಟ್ಟಸ್ವಾಮಿಯವರು ಹೇಳಿದ ವಿಚಾರದಲ್ಲಿ ಕೂಡಲೇ ಹಾ. ಹನುಮಯನವರನ್ನು ಅಲ್ಲಿಗೆ ಕಳಿಸಿ ಅವರನ್ನು ಪ್ರೈವೇಟ ನರ್ಸಿಂಗ್ ಹೋಂಗಾದರೂ ಕಳಿಸುವುದಕ್ಕೆ ಏರ್ಪಾಡು ಮಾಡುತ್ತೇನೆ. ಇದರಿಂದ ಅವರಿಗಾದ ತೊಂದರೆಗಾಗಿ ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇಂಥ ಸಂದರ್ಭಗಳಲ್ಲಿ ಸರ್ಕಾರ ಸುಮ್ಮನೆ ಇರುವುದಿಲ್ಲ. ಅನೇಕ ಸಾರಿ ಸಹಾನುಭೂತಿಯಿಂದ ನೋಡಬೇಕಾಗುತ್ತದೆ. ಈಗಲಾದರೂ ನಾನು ಹೇಳುವುದೇನೆಂದರೆ, ಅವರು ಯಾರು ಬಂದು ಬೇಕಾದರೂ ನನ್ನನ್ನು ನೋಡಬಹುದು; ಅಥವಾ ತಾವು ಯಾರಾದರೂ ಅವರ ಬಗ್ಗೆ ಹೇಳಿದರೂ ಸರಿಯೆ, ಕೇಳುತ್ತೇನೆ. ಅಂತೂ ಇದನ್ನು ಬಗೆಹರಿಸುವುದದಕ್ಕೆ ಸಹಾಯ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಮಾತುಕತೆ ಪ್ರಾರಂಭ ಮಾಡುವುದಕ್ಕೆ ಮೊದಲು ಅವರು ಕೆಲಸದ ಮೇಲೆ ಹೋಗಬೇಕು. ಸರ್ಕಾರದಲ್ಲಿ ನಂಬಿಕೆ ಇಟ್ಟು ಅವರು ಹೋಗಿ ಕೆಲಸವನ್ನು ಪ್ರಾರಂಭ ಮಾಡಬೇಕು.

It is a condition precedent. Then, as a gentleman's word, I give you an assurance that I shall examine it in all its aspects. Only 2 per cent of the people have been taking 43 per cent of the national income and hold us to ransom ಎಂದು ಅನೇಕ ಸಾರಿ ಕೆ. ಆರ್. ಎಸ್. ನಾಯ್ಡು ಅವರು ಹೇಳಿದ್ದಾರೆ. ಈ ದೃಷ್ಟಿಯಿಂದ ಅವರು ತಿಳಿದುಕೊಳ್ಳಬೇಕಾದುದು ಇಷ್ಟೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಇದು ಸ್ಯಾಲರಿಯಲ್ಲ; ಇದು ಒಂದು ಸ್ಯಾಲರಶಿಪ್. ಇದಕ್ಕೆ ರೈಟ್ ಇಲ್ಲ. ನಾವು ಏನೋ ಅನುಕೂಲವಾಗಲಿ, ಮತ್ತು ಅವರಿಗೆ ತೊಂದರೆಯಾಗದೆ ಇರಲಿ ಎಂದು ಅದನ್ನು ಕೊಟ್ಟಿದ್ದೇವೆ. They cannot claim it as a matter of right.

It is a concession shown to the students. They are still students. They have not yet taken their degree and become degree holders. I would once again thank the hon. members for the kind encouragement given to take such action as been necessary under the circumstances.

ಶ್ರೀ ಬಿ. ಜಿ. ಬಣಕಾರ —ಅಧ್ಯಕ್ಷರೇ, ಈಗ ರಾಜ್ಯದಲ್ಲಿ ಸರ್ಕಾರದ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಡಾಕ್ಟರುಗಳು ಸರ್ಕಾರದ ನೌಕರರು. ರೋಗಿಗಳಿಗೆ ಚಿಕಿತ್ಸೆಮಾಡುವಾಗ ಹಾಸ್ ಸರ್ಜನ್ಸ್ ಅವರ ಒಂದು ಕರ್ತವ್ಯಕ್ಕೆ ಛಡ್ಡಿಬರುವುದು ಅಕ್ಷಮ್ಯ ಅಪರಾಧ. ನಾವು ಎಂ. ಎಲ್. ಎ. ಗಳು ಖಾಸಗಿಯಾಗಿ ಹೋಗಿಯಾದರೂ ಅಲ್ಲಿ ನಮ್ಮ ಕಷ್ಟಗಳನ್ನು ಬಗೆಹರಿಸಿಕೊಳ್ಳ ಬಲ್ಲೆವು. ಆದರೆ ಜನಸಾಮಾನ್ಯರಿಗೆ ಅದು ಆಗುವುದಿಲ್ಲ. ಅದರೆ ಅಲ್ಲಿ ಅವರು ಸರ್ಕಾರದ ಕೆಲಸಕ್ಕೆ ಹರಕತ ಮಾಡಿದರೆ ಅದು ಸರಿಯಲ್ಲ. ಆ ರೀತಿಯಾಗಿ ಮಾಡಕೂಡದು. ಪೋಲೀಸ್ ಅಧಿಕಾರಿಗಳಿಗೆ ಈಗಲೇ ಒಂದು ಆದೇಶವನ್ನು ಕೊಟ್ಟು ದವಾಖಾನೆಗಳಿಗೆ ಹೋಗಿ ಆ ಹುಡುಗರಿಗೆ ಸರ್ಕಾರದ ಕೆಲಸಕ್ಕೆ ಹರಕತ್ ಮಾಡಬಾರದೆಂದು ಒಂದು ತಾಸು, ಎರಡು ತಾಸು ಹೇಳಲಿ. ಹಾಗೂ ಅವರು ಕೇಳದಿದ್ದರೆ, ಕಾನೂನು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ವಾಟಾಳ ನಾಗರಾಜ್:—ಮಾನ್ಯ ಶ್ರೀ ಸಿದ್ಧವೀರಪ್ಪನವರ ಮಾತನ್ನು ನಾನು ಕಳಕಳಿಯಿಂದ ಕೇಳಿದೆ. ಸತ್ಯಾಗ್ರಹ ಮಾಡಬಾರದು, ಸತ್ಯಾಗ್ರಹ ಮಾಡುವುದು ಸರಿಯಲ್ಲವೆಂದು ಹೇಳಬಾರದು. ಬರೀ ರೋಗಿಗಳಿಗೆ ತೊಂದರೆ ಕೊಡುವುದು ಸರಿಯಲ್ಲ. ರೋಗಿಗಳಿಗೆ ತೊಂದರೆಯಾಗದ ರೀತಿಯಲ್ಲಿ ರೋಗಿಗಳಿಂದ ಯಾವುದೇ ರೀತಿಯಲ್ಲಿ ಆಕ್ಷೇಪಣೆ ಬಾರದೇ ಇರುವರೀತಿಯಲ್ಲಿ ಸತ್ಯಾಗ್ರಹ ಮಾಡಲಿ. ಸರ್ಕಾರದ ನೀತಿಗೆ ವಿರುದ್ಧವಾಗಿ ಸತ್ಯಾಗ್ರಹಮಾಡ ಬಾರದು. ಅದರೆ ಸತ್ಯಾಗ್ರಹವನ್ನೇ ಮಾಡಬಾರದೆಂದು ಹೇಳುವುದು ಒಳ್ಳೆಯದಲ್ಲ. ಅವರ ಮೇಲೆ ಒಂದು ಉಗ್ರವಾದ ಕ್ರಮವನ್ನು ಕೈಗೊಳ್ಳುವುದಕ್ಕೆ ಮುಂಚಿತವಾಗಿ ನಾನು ಹೇಳುವುದೇನೆಂದರೆ, ಇದು ಯಾರ ಪ್ರಿಸ್ಟೇಜ್ ಪ್ರಶ್ನೆಯೇನೂ ಅಲ್ಲ. ಸಂಜೆಯೊಳಗೆ ತಾವೇ ಇನಿಷಿಯೇಟೀವ್ ತೆಗೆದುಕೊಂಡು ಅವರ ಕಡೆಯವರನ್ನೇ ಕರೆದು ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು. ಈ ರೀತಿಯಾಗಿ ಕರೆಯುವುದರಿಂದ, ಅವರ ಒಂದು ಸತ್ಯಾಗ್ರಹದಮೇಲೆ ರೋಗಿಗಳಿಗೆ ಯಾವ ರೀತಿಯಲ್ಲಿಯೂ ತೊಂದರೆಯಾಗಬಾರದು. ಆಸ್ಪತ್ರೆ ಕೆಲಸಕಾರ್ಯಗಳಿಗೂ ತೊಂದರೆ ಆಗಬಾರದು. ಅವರ ಬೇಡಿಕೆಯನ್ನು ಸರ್ಕಾರದವರು ಜಾಗ್ರತೆಯಾಗಿ ಈಡೇರಿಸಬೇಕು.

ಶ್ರೀ ಎಚ್. ಸಿದ್ಧವೀರಪ್ಪ:—ಸತ್ಯಾಗ್ರಹದ ಕಟ್ಟೆ ಇರುವುದು ವಿಧಾನಸೌಧದ ಹತ್ತಿರ, ವಿಕ್ಟೋರಿತಿಯೂ ಆಸ್ಪತ್ರೆಯ ಹತ್ತಿರವಲ್ಲ.

† Sri.C.M.ARUMUGHAM (K.G.F.).—Sir, our Hon'ble Minister, Sri H. Siddaveerappa is not only a senior Minister, but

he is also aware of the sufferings of the human beings in the country as also the grievances of the Doctors and House Surgeons. Now, there have been some complaints that on account of the present strike of the House Surgeons and their demonstration in the Hospital and elsewhere, even the regular Doctors are not allowed to attend on the patients and the House Surgeons are preventing them from attending to their duties. However, the Hon'ble Minister will agree with me that the House Surgeons have put forward a demand for the enhancement of their stipend on the ground that what the Government is paying them at present is not sufficient; so they are urging to increase it. That aspect of the question must be looked into for the following reasons:

1) Some of the House Surgeons are not economically sound and are not able to maintain themselves;

2) Some of the House Surgeons are also married and have children. So those House Surgeons have to look after their family.

It is these reasons that necessitated them to agitate for more stipend. But I am not one of those that will agree that they should launch an agitation for this purpose and stage demonstration, deserting their sacred work. Let them represent their grievances to the Minister. There are about 1,200 House Surgeons and you cannot ask them to maintain themselves with the present stipend and work peacefully. What the House Surgeon gets, monthy Rs. 150 is very low because even a peon in the Secretariat gets more than Rs. 150. It is argued that the House Surgeons are still students. Let them be students but they take some responsibility for treating the patients.

What I would suggest to the Hon'ble Minister is that from the point of view of smooth administration, he should find out whether they have a genuine grievance and case and whether they are correct in what they are asking for. For this purpose, I suggest that their grievances may be referred to the Secretary to Government, Health Department, or some senior Officer of the Secretariat. Let the House Surgeons make representaitons to the Secretary,

Health Department in writing and verbally. Let the Secretary go through their case in entirety and report to the Government. If the Government is satisfied with the report of the Secretary that they have a real grievance, let Government implement it. Till such time the recommendations of the Secretary to Government are received, I am one of those who will agree with the Ministers that they must join duty at once. Simultaneously there must be an announcement from the Minister that their grievances would be referred to the Secretary to Government, with the direction that the Secretary should submit his report within a week. On that report the Government should take their decision as expeditiously as possible.

† Sri H. SIDDAVEERAPPA.—This is a procedural matter. I repeat my assurance that with utmost consideration, I will look into their charter of demands. I have made it very clear that a decision will have to be taken on these issues in the Cabinet because any financial implications will have to be examined there. It will be considered on its merits; it will be considered as sympathetically as is possible under the circumstances. As I stated the other day, to Sri. Kagod Thimmappa this is a question of scholarship; this is not a question of salary. As a matter of fact, in these hard days, nobody is satisfied; nobody can every be satisfied in view of the spiralling, soaring prices. If some of the House Surgeons are married and cannot maintain themselves, I sympathise with them. But there are also so many students who are married and have one or two children: they are not bothered because they have got potential fathers-in-law who can look after them. With that kind of grievance we need not bother. I would again assure the House and the House Surgeons that I will not be carried away by anger or by emotion. I will hear them sympathetically. But I cannot go after them. If they have grievances, they must come to me; they have come. I will hear them. There are friends on this side who are as sympathetic as those on the other side. On my part, I would assure that I would never do anything in a spirit of vengeance.